ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಆನೇಕಲ್ ತಾಲ್ಲೂಕಿನಲ್ಲಿ 3,610 ಜನರು 3936-33 ಎಕರೆ ಸರ್ಕಾರಿ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ.

ಆ) ಸರ್ಕಾರಿ ಜಮೀನಿನ ಬಗರ್‌ಹುಕುಂ ವಿಸ್ತೀರ್ಣದ ಪೈಕಿ ಸ್ವಲ್ಪ ವಿಸ್ತೀರ್ಣವು ಹಸಿರುಪಟ್ಟಿಯಲ್ಲಿ ಬರುತ್ತದೆ.

ಇ) ರಾಜ್ಯದಲ್ಲಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕಾಗಿ, ಕರ್ನಾಟಕ ಭೂ ಕಂದಾಯ ಕಾಯಿದೆ 1964ಕ್ಕೆ ಕಲಂ 94(ಎ) ಅನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯಿದೆ, 1990ರಂತೆ ಸೇರಿಸಲಾಗಿದೆ. ಇಂತಹ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಕಾರ್ಯವಿಧಾನವನ್ನು ಸದ್ಯದಲ್ಲಿಯೇ ಹೊರಡಿಸಲಿರುವ ಮೇಲಿನ ತಿದ್ದುಪಡಿ ಕಾಯಿದೆಯನ್ವಯ ತಯಾರಿಸಿರುವ ನಿಯಾಮಾವಳಿಗನುಸಾರವಾಗಿ ಮಾಡಲಾಗುತ್ತದೆ.

ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮದ ಸರ್ಕಾರಿ ಜಮೀನಿನ ಒತ್ತುವರಿ.

1261 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಹಲಗೆವಡೇರಹಳ್ಳಿ ಗ್ರಾಮದ ಸರ್ಕಾರಿ ಓಣಿ ಖಿಷ್ಕಿ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಸರ್ಕಾರಿ ಭೂಮಿಯನ್ನು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಒತ್ತುವರಿ ಮಾಡಿರುವ ಸರ್ಕಾರಿ ಓಣಿ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಗ್ರಾಮದ ಬಡ ಜನರಿಗೆ ಉಚಿತ ನಿವೇಶನಗಳ ಅನುಕೂಲಕ್ಕೆ ಉಪಯೋಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಬೆಂಗಳೂರು ದಕ್ಷಿಣತಾಲ್ಲೂಕು, ಕೆಂಗೇರಿ ಹೋಬಳಿ, ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಹಲಗೆವಡೇರಹಳ್ಳಿ ಗ್ರಾಮದಲ್ಲಿ ಸರ್ಕಾರಿ ಓಣಿಯ ವಿಸ್ತೀರ್ಣ 0-18 ಗುಂಟೆ ಆಗಿರುತ್ತದೆ.

ಆ) ಸದರಿ ಜಮೀನನ್ನು ಯಾರು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿರುವುದಿಲ್ಲ.

ಇ) ಸದರಿ ಜಮೀನು ಸರ್ಕಾರಿ ಓಣಿ ಜಮೀನಾಗಿರುವುದರಿಂದ ಉಚಿತ ನಿವೇಶನ ಹಂಚಲು ಯೋಗ್ಯವಾಗಿದ್ದಲ್ಲಿ ಪರಿಶೀಲಿಸಿ ಅಗತ್ಯಕ್ರಮ ಜರುಗಿಸಲಾಗುವುದು.

ಕೋಲಾರ ಜಿಲ್ಲೆಯಲ್ಲಿ ಭೂ ಮಂಜೂರಾತಿಯ ನಿಯಮಗಳ ಉಲ್ಲಂಘನೆ.

1296 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಭೂ ಮಂಜೂರಾತಿಯ ಸಮಯದಲ್ಲಿ ಸರ್ಕಾರವು ಭೂ ಮಂಜೂರಾತಿಯ ನಿಯಮಗಳನ್ನು ಪಾಲಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಆ ಭೂ ಮಂಜಾರಾತಿಯ ನಿಯಮಗಳೇನು?